ಸಾಕ್ಷಿಯನ್ನು ದಿಃ 04-02-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಆರ್ ಜಿ ಹೆಚ್ (ಪ್ರತಿವಾದಿ ನಂ.1 ಮತ್ತು 3 ರ ಪರವಾಗಿ)**

ನನ್ನ ಹೆಸರು ಲಕ್ಷ್ಮವ್ವ @ ವಿಜಯಲಕ್ಷ್ಮೀ ಇರುತ್ತದೆ. ಆ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ಈ ಕೇಸಿನಲ್ಲಿ ಹಾಜರಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆ. ದಾವಾ ಆಸ್ತಿ ಸರ್ವೇ ನಂ.2/1+2+3 ಎ+3 ಬಿ/ಬಿ ಆಸ್ತಿ ಮೂಲತಃ ನನ್ನ ತಾಯಿಯ ತಂದೆ ಶಿವಪ್ಪ ಸವದಿ ಇವರಿಗೆ ಸೇರಿದ್ದು, ಅವರಿಂದ ನನ್ನ ತಾಯಿ ಅಕ್ಕಮ್ಮ ಪಲ್ಲೇದ ಇವರಿಗೆ ಬಂದಿರುತ್ತದೆ. ಸರ್ವೇ ನಂ.96/1 ನ್ನು ನಮ್ಮ ತಾಯಿಯ ತಂದೆ ತನ್ನ ಮಗಳಾದ ನಮ್ಮ ತಾಯಿ ಅಕ್ಕಮ್ಮ ಹೆಸರಿನಲ್ಲಿ ಖರೀದಿಸಿದ್ದಾರೆ. ಈ ಎರಡೂ ಆಸ್ತಿಗಳು ನನ್ನ ತಾಯಿಯ ಸ್ವಂತ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿ. ಆಸ್ತಿ ಸರ್ವೇ ನಂ.2/1+2+3 ಎ+3 ಬಿ/ಬಿ ಆಸ್ತಿಯನ್ನು ನಮ್ಮ ತಾಯಿ ಪ್ರತಿವಾದಿ ನಂ.3 ಚಂದ್ರಶೇಖರ ಇವರಿಗೆ ಭಕ್ಷೀಸ ಮಾಡಿದ್ದಾರೆ ಎಂದರೆ ಸರಿ. ಆಸ್ತಿ ಸರ್ವೇ ನಂ.96/1 ಆಸ್ತಿಯನ್ನು ನಮ್ಮ ತಾಯಿ ಪ್ರತಿವಾದಿ ನಂ.2 ಮತ್ತು 3 ಚಂದ್ರಶೇಖರ ಇವರಿಗೆ ನೀಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಾಯಿ ನಮಗೆ ಹೇಳದೆ ಕೇಳದೆ ಸದರಿ ಆಸ್ತಿಗಳನ್ನು ಪ್ರತಿವಾದಿ ನಂ.2 ಮತ್ತು 3 ರವರಿಗೆ ಮಾಡಿದ್ದಾಳೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳು ನಮ್ಮ ತಾಯಿಯ ಸ್ವಂತ ಆಸ್ತಿಗಳಾಗಿರುವುದರಿಂದ ತನ್ನ ಇಚ್ಛಾನುಸಾರ ತನ್ನ ಗಂಡು ಮಕ್ಕಳಿಗೆ ಮಾಡಿದ್ದಾಳೆ ಎಂದರೆ ನಾನು ಆಕೆಯ ಮಗಳಾಗಿದ್ದು ನನಗೂ ಸ್ವಲ್ಪ ಕೊಡಬೇಕಾಗಿತ್ತು ಎಂದರು ಹೇಳುತ್ತಾರೆ.

ದಾವಾ ಆಸ್ತಿ ಸರ್ವೇ ನಂ.195/2+3 ಎ+3 ಬಿ/2 ಬಿ/2 ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಈ ಆಸ್ತಿಯಲ್ಲಿ ಮಾತ್ರ ನನಗೆ ಪಾಲಿದೆ ಎಂದರೆ ನನಗೆ ಎಲ್ಲಾ ಆಸ್ತಿಯಲ್ಲಿ ಬೇಕು ಎಂದು ಹೇಳುತ್ತಾರೆ. ದಾವಾ ಆಸ್ತಿ 'ಎ' ಮತ್ತು 'ಬಿ' ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಮತ್ತು ನಾನು ಶಾಮೀಲಾಗಿ ಪ್ರತಿವಾದಿ

ನಂ.1 ಮತ್ತು 3 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.2 ಗೈರು ಹಾಜರಿದ್ದು ಯಾರೂ ಪ್ರತಿನಿಧಿಸದ ಕಾರಣ ಹಾಗೂ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

C/C. ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.